ಶ್ರೀ ಕೆ. ಲಕ್ಕಪ್ಪ.—ಡಿಪ್ರೆಸ್ಡ್ ಕ್ಲಾಸ್ ಇಕ್ಸ್‌ಪೆಕ್ಟರುಗಳಿಗೂ, ರೆಗ್ಯುಲರ್ ಇಕ್ಸ್‌ಪೆಕ್ಟರುಗಳಿಗೂ ವಿಧಾಯಕ ಮಾಡಿರುವ ವಿದ್ಯಾರ್ಹತೆಯಲ್ಲಿ ವ್ಯತ್ಯಾಸವೇನಾದರೂ ಇದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಡಿಪ್ರೆಸ್ಡ್‌ಕ್ಲಾಸ್ ರೆವೆನ್ಯೂ ಇಕ್ಸ್‌ಪೆಕ್ಟರುಗಳ ಸ್ಥಾನಕ್ಕೆ ಎರಡನೇ ಗ್ರೇಡ್ ಗುಮಾಸ್ತರನ್ನು ನೇಮಕ ಮಾಡಲಾಗುತ್ತಿದೆ. ರೆಗ್ಯುಲರ್ ಇಕ್ಸ್‌ಪೆಕ್ಟರುಗಳಲ್ಲಿ ಎರಡು ತರಹವಿದೆ, ಮೊದಲನೆ ದರ್ಜೆ ಮತ್ತು ಎರಡನೆ ದರ್ಜೆ ಎಂದು. ಮೊದಲನೆ ದರ್ಜೆಗೆ ಪದವೀಧರರಾಗಿರಬೇಕು. ಎರಡನೆ ದರ್ಜೆಗೆ ಎಸ್. ಎಸ್. ಎಲ್. ಸಿ. ಆಗಿರಬೇಕು.

ಶ್ರೀ ಎಂ. ಚಿಕ್ಕಲಿಂಗಯ್ಯ.—ತಾವು ಈಗ ಸ್ಪೆಷಲ್ ರೆವೆನ್ಯೂ ಇಕ್ಸ್‌ಪೆಕ್ಟರುಗಳು ಮಾಡಬೇಕಾದ ಕೆಲಸಗಳನ್ನು ಸಭೆಯ ಅವಗಾಹನೆಗೆ ತಂದಿರಿ. ಇದರಲ್ಲಿ ದರಖಾನ್ತು, ಅಕ್ಯಿಜಿಷ್ಟ್ ರಿಕಾರ್ಡ್‌ಗಳನ್ನು ಬಿಲ್ಡ್‌ಅಪ್ ಮಾಡುವುದು ಇವೆಲ್ಲವೂ ಇವೆ. ಹೀಗಿರುವಾಗ ತಾವು ಕೊಟ್ಟ ಉತ್ತರದಲ್ಲಿ ದರಖಾನ್ತು, ರಿಕಾರ್ಡು ಮತ್ತು ಅಕ್ಯಿಜಿಷ್ಟ್ ರಿಕಾರ್ಡುಗಳನ್ನು ಮಾಡುವ ಕೆಲಸ ಇವೆಲ್ಲವೂ ಬೇರೆ ಇಕ್ಸ್‌ಪೆಕ್ಟರುಗಳಿಗೆ ವಹಿಸಲಾಗಿದೆ ಎಂದು ತಿಳಿಸಿದ್ದೀರಿ. ಒಂದಕ್ಕೊಂದಕ್ಕೆ ಕಾಂಟ್ರಡಿಕ್ಟರಿ ಆಗುವುದಿಲ್ಲವೆ ?

Sri H. M. CHANNABASAPPA.—Where in any particular case, if any person is found to be incompetent to build up darakhast records on account of inefficiency or inexperience, in such cases, those darkhast records will be got build up by the regular Revenue Inspectors.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಸ್ಪೆಷಲ್ ರೆವೆನ್ಯೂ ಇಕ್ಸ್‌ಪೆಕ್ಟರುಗಳಿಗೆ ನಿಮ್ಮ ತರಗತಿಯವರಿಗೆ ಸಂಬಂಧಪಟ್ಟ ದರಖಾನ್ತು ಮತ್ತು ಅಕ್ಯಿಜಿಷ್ಟ್ ರಿಕಾರ್ಡ್ ಕೆಲಸ/ಜಾಸ್ತಿಯಾದ ಮೇಲೆ ಅವರ ಕೆಲಸ ಹೆಚ್ಚಾಗಿದೆ ಎಂದು ಆ ಕೆಲಸವನ್ನು ಅವರಿಂದ withdraw ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ದರಖಾನ್ತು ಮತ್ತು ಅಕ್ಯಿಜಿಷ್ಟ್ ರಿಕಾರ್ಡ್ ಕೆಲಸವನ್ನು ಇವರಿಗೆ ಕೊಡಕೂಡದೆಂದು ಆಜ್ಞೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

Sri H. M. CHANNABASAPPA.—Not that I know of so far. Anyway, I will examine it.

Road between Maralavadi and Hunasanahalli (construction).

Q.—6. Sri S. KARIYAPPA (Virupakshapura).—

Will the Government be pleased to state:—

(*a*) whether there is a representation for several years past for construction of a road between Maralavadi and Hunasanahalli in Kanakapura Taluk;

(*b*) the names of village through which this proposed road is to pass;

(*c*) whether there is an estimate prepared for this road;

(*d*) if it is so, the estimated cost?

A.—Sri H. M. CHANNABASAPPA (Minister for Revenue and Agriculture).—

(*a*) No.

(*b*), (*c*) and (*d*) Do not arise in view of reply to clause (*a*).

ಶ್ರೀ ಎಸ್. ಕರಿಯಪ್ಪ.—ಇದು ಫಾರೆಸ್ಟ್ ರಸ್ತೆ ಅಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು.

ಶ್ರೀ ಎಸ್. ಕರಿಯಪ್ಪ.—ಈ ಫಾರೆಸ್ಟ್ ರಸ್ತೆಯನ್ನು ಟಾರ್ ಮಾಡತಕ್ಕ ವಿಚಾರದಲ್ಲಿ, ಅದನ್ನು ರಿಪೇರಿ ಮಾಡತಕ್ಕ ವಿಚಾರದಲ್ಲಿ, ಅಭಿವೃದ್ಧಿಪಡಿಸತಕ್ಕ ವಿಚಾರದಲ್ಲಿ ಈ ಸಭೆಯಲ್ಲಿ ಹಲವು ಬಾರಿ ಖೋತಾ ಸೂಚನೆಗಳೂ, ಪ್ರಶ್ನೆಗಳೂ ಬಂದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಫಾರೆಸ್ಟ್ ರಸ್ತೆಯನ್ನು ಅರಣ್ಯ ಇಲಾಖೆಯವರ ಉಪಯೋಗಕ್ಕಾಗಿ ಅವರು ಮೈಂಟೈನ್ ಮಾಡಿಕೊಂಡಿದ್ದಾರೆ. ಅವರು ಸಂಚಾರ ಮಾಡಲು ಎಷ್ಟುಮಟ್ಟಿಗೆ ಇಟ್ಟುಕೊಳ್ಳಬೇಕೋ ಅಷ್ಟುಮಟ್ಟಿಗೆ ಇಟ್ಟುಕೊಂಡಿದ್ದಾರೆ.

ಶ್ರೀ ಎಸ್. ಕರಿಯಪ್ಪ.—ಇದು ಫಾರೆಸ್ಟ್ ರಸ್ತೆಯಾದರೂ ಕೂಡ ಇತರ ಜನಗಳು ಈ ರಸ್ತೆಯಲ್ಲಿ ಸಂಚಾರ ಮಾಡಕೂಡದೆಂದು ಅಡ್ಡಿ ಇದೆಯೇ? ಇದನ್ನು ಅರಣ್ಯ ಇಲಾಖೆಯವರು ಮಾತ್ರ ಉಪಯೋಗಿಸಬೇಕೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಾಕಿಯವರು ಈ ರಸ್ತೆಯಲ್ಲಿ ತಿರುಗಾಡಿದರೂ ನಾವು ಬೇಡವೆನ್ನುವುದಿಲ್ಲ.

ಶ್ರೀ ಎಸ್. ಕರಿಯಪ್ಪ.—ಜನಜಾನವಾರುಗಳಿಗೂ 12 ಗ್ರಾಮಗಳ ಜನರಿಗೂ ಅನುಕೂಲವಾಗಿರತಕ್ಕ ಈ ರಸ್ತೆಯನ್ನು ಅಭಿವೃದ್ಧಿ ಮಾಡಿಸಬೇಕೆಂದು ಬಹು ಕಾಲದಿಂದ ಕೇಳುತ್ತಿದ್ದರೂ ಸಹ ಇದಕ್ಕೆ ಏತಕ್ಕೆ ಗಮನ ಕೊಟ್ಟಿಲ್ಲ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮಗೆ ಬಂದಿರುವ ಸಮಾಚಾರದ ಪ್ರಕಾರ 1952-53ನೇ ಸಾಲಿನಲ್ಲಿ 2,058 ರೂಪಾಯಿಗಳನ್ನು ಖರ್ಚುಮಾಡಿ ರಿಪೇರಿ ಮಾಡಿದ್ದಾರೆ. 1953-54ರಲ್ಲಿ 2,196 ರೂಪಾಯಿಗಳನ್ನು ಖರ್ಚುಮಾಡಿ ಪುನಃ ರಿಪೇರಿ ಮಾಡಿದ್ದಾರೆ.

ಶ್ರೀ ಎಸ್. ಕರಿಯಪ್ಪ.—ಈ ರಸ್ತೆಯ ಉದ್ದವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಪ್ಪತ್ತು ಮೈಲಿ ಎರಡು ಫರ್ಲಾಂಗ್.

ಶ್ರೀ ಎಸ್. ಕರಿಯಪ್ಪ.—ಇದಕ್ಕೆ ಎರಡು ಸಾವಿರ ರೂಪಾಯಿ ಸಾಕಾಗುತ್ತದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಮೈಂಟೆನೆನ್ಸ್ ಗ್ರಾಂಟ್ ಅಷ್ಟೆ.